ಬೆಂಗಳೂರು ಸಬಾರ್ಡಿನೇಟ್ ಜಡ್ಜ್ ರವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ಮಾಮೂಲ್ ಪೇಟೇಲಿರುವ ಗುರುಬಸಪ್ಪನವರ ವಿಷಯದಲ್ಲಿ

ಸ್ಟ॥ 1906—07ನೆ ಇಸವಿ ದಿವಾಳಿ ಕೇಸ್ ಮಿಸ್. ನಂಬರು 220.

ಹುಕ್ಕುಂ

ಮೇಲ್ಕಂಡ ಗುರುಬಸಪ್ಪನವರು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಬೆಂಗಳೂರು ಸಬಾರ್ಡಿನೇಟ್ ಜಡ್ಜ್ ಜೆ. ಹೆಚ್. ಭಾಭಾ, ಎಸ್ಕೊಯರ್, ಬಿ. ಎ., ಬ್ಯಾರಿಸ್ಟರ್ ಅಟ್ ಲಾ ಯವರ ರೂಬರೂಬ್ ಅರ್ಜೀದಾರರಾದ ಗುರುಬಸಪ್ಪನವರ ಪರವಾಗಿ ಮತ್ತು ಸದರೀಯವರ ಲೇಣೇದಾರರಾದ 1ನೆ ಕರಬಕೆಟ್ಟರನ್ನು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿ ಯಾಗಲೀ ಅಥವಾ ಲಾಯರ್ ಮೂಲಕವಾಗಿಯಾಗಲೀ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ,—1. ವೀರಭದ್ರಕೆಟ್ಟ, 2. ದೊಡ್ಡವೀರಕೆಟ್ಟ, 3. ಹುಚ್ಚಣ್ಣ ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಗುರುಬಸಪ್ಪನವರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಎಂದು ಇದರಿಂದ ಹುಕುಂ ಮಾಡಲ್ಪಟ್ಟು ಇರುತ್ತೆ.

ಸ್ಟ॥ 1907ನೆ ಇಸವಿ ಜುಲೈ 27ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನನ್ನ ದಸ್ತಖತ್‌ನಿಕಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು	ಲೇಣೇದಾರ್ರ ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಸಾಲದ ಮೊಬಲಗು	ಯಾವಾಗ ಬೇಕಾದರೂ ಕೊಡುವದು	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
		ರೂ.			
1	ಬೆಂಗಳೂರು ಮಾಮೂಲ್‌ಪೇಟೆಲಿರುವ 1. ಕರಬಕೆಟ್ಟ, 2. ವೀರಭದ್ರಕೆಟ್ಟ, 3. ದೊಡ್ಡವೀರಕೆಟ್ಟ ಸಹ.	160	...	ಡಿಕ್ರಿಯಾಗಿರುವದು	ಈ ಕೋರ್ಟು ಜಾರಿ 69—06-07
2	ಡಿಟೋ ...	6,700	...	ಡಿಟೋ	ಡಿಟೋ 536-05-06.
3	ಗುಡೇಮಾರ್ನಹಳ್ಳಿ ಹುಚ್ಚಣ್ಣ ...	525	...	ಈ ಡಿವ್ಯಾಂಡ್ ಪ್ರಾಂಸರಿ ಬಾಬತ್ತು.	
	ಜುಮ್ಲಾ ...	7,385			

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ರಣವೀರಕೆಟ್ಟ ಪೈಟೆಯಲ್ಲಿರುವ ಮಂಜರಾಬಾದ್ ಪಾಳ್ಯೇಗಾರ

ಚಿಕ್ಕ ಕೃಷ್ಣಪ್ಪನಾಯಕರ ವಿಷಯದಲ್ಲಿ—

ಸ್ಟ॥ 1906—07ನೆ ಇಸವಿ ದಿವಾಳಿ ಮಿ॥ ಕೇಸ್ ನಂಬರು 276

ಹುಕ್ಕುಂ

ಮೇಲ್ಕಂಡ ಚಿಕ್ಕ ಕೃಷ್ಣಪ್ಪನಾಯಕನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು—ಬೆಂಗಳೂರು ಸಬಾರ್ಡಿನೇಟ್ ಜಡ್ಜ್ ಜೆ. ಹೆಚ್. ಭಾಭಾ, ಎಸ್‌ಕೊಯರ್, ಬಿ. ಎ., ಬ್ಯಾರಿಸ್ಟರ್ ಅಟ್ ಲಾ ಯವರ ರೂಬರೂಬ್ ಅರ್ಜೀದಾರರಾದ ಚಿಕ್ಕ ಕೃಷ್ಣಪ್ಪನಾಯಕರ ಪರವಾಗಿ ಅಡ್ವೋಕೇಟ್ ಮಿ॥ ಹೆಚ್. ಕೃಷ್ಣಪ್ಪನವರು ಹಾಜರು ಮತ್ತು ಸದರೀ ಯವರ ಲೇಣೇದಾರರಾದ ಬಂದನೆ ಪಾಪಮ್ಮನ ಪರ ಮೆ॥ ಮೂರ್ತಿರಾಯರು ಹಾಜರು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿ ಯಾಗಲೀ ಅಥವಾ ಲಾಯರ್ ಮೂಲಕವಾಗಿಯಾಗಲೀ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ, ತಿರುಮಳೈಯ್ಯ, ಪಾಪಣ್ಣ, ನರಸೈಯ್ಯ, ಅನಂತಯ್ಯ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಚಿಕ್ಕಕೃಷ್ಣಪ್ಪ ನಾಯಿಕರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾಗಿದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿ ಯಾಗಲೀ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಎಂದು, ಇದರಿಂದ ಹುಕ್ಕುಂ ನೊಡಲ್ಪಟ್ಟು ಇರುತ್ತೆ.

ಸ್ರ 1907ನೆ ಇಸವಿ ಜೂ 12ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂ.	ಲೇಣೇದಾರ್ರ ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೆಜ್ಜೆ ನ್ಯಾಯಾಧಿಪತಿ	ದೇಹಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
		ರೂ. ಆ. ಪೈ.			
1	ಬೆಂಗಳೂರು ಕುಂಬಿಗರ ಪ್ಯಾಟೆಯಲ್ಲಿರುವ ದೇವಾಂಗದ ಪಾಪಮ್ಮ.	40 0 0	(...)	ಬಡ್ಡಿ ಪತ್ರದ ಬಾಬತು.	
2	ಡಿಟೋ	91 5 0	...	ಈ ಕೋರ್ಟು ಸ್ಮಾಲ್‌ಕಾಜ್ 270-04-05 ಡಿಕ್ರಿ ಬಾಬತು.	
3	ತ್ಯಾವಗೊಂಡ್ಲದಲ್ಲಿರುವ ಬಿಳೇ ಮಗ್ಗ ಬ್ಯಾಟೆ ವೆಂಕಟ್ರಾಯಪ್ಪನ ಮಗ ತಿರುಮಳಯ್ಯ.	150 0 0	...	ಅರ್ಜಿದಾರ ಮತ್ತು ಈತನ ಮಗ ಸಹ ಬರಕೊಟ್ಟಿರುವ ಪ್ರಾಂಸರಿ ಬಾಬತು.	
4	ಡಿಟೋ ..	500 0 0	...	ಬಡ್ಡಿ ಪತ್ರದ ಬಾಬತು.	
5	ಮೈಸೂರು ದೊಡ್ಡ ಪೇಟೆ ಕುಂಬಾರ ಗೇರೀಲಿರುವ ಅಕ್ಕಿ ಅಂಗಡಿ ಪಾಪಣ್ಣ ಮತ್ತು ಇವರ ಅಣ್ಣ ನರಸೈಯ್ಯ.	70 0 0	...	ಅರ್ಜಿದಾರ ಮತ್ತು ಇವರ ಕುಟುಂಬ ಸಹ ಬರಕೊಟ್ಟಿರುವ ಪ್ರಾಂಸರಿ ಬಾಬತು.	ನರಸೈಯ್ಯನ ಹೆಸರಿನ ಪ್ರಾಂಸರಿ.
6	ಬೆಂಗಳೂರು ದೊಡ್ಡಪೇಟೆ 1816ನೆ ನಂಬರಿ ಅಂಗಡೀಲಿರುವ ಕುಸುಮೊ ಅನಂತಯ್ಯ.	20 0 0	...	ಲೆಕ್ಕದ ಬಾಬತು.	
	ಜುಮ್ಲಾ ...	871 5 0			

ದಿವಾಳಿಯಾದ ಡಿಕ್ರೀ ದೇಣೇದಾರ ಆನೇಕಲ್ ತಾಲ್ಲೂಕು ಸರ್ಜಾಪುರದ ಹೋಬಳಿ ದೊಮ್ಮಸಂದ್ರದಲ್ಲಿರುವ ಬಾಣಿಗರ ಗುರುಮೂರ್ತಪ್ಪನ ವಿಷಯದಲ್ಲಿ.

ಸ್ರ 1906—07ನೆ ಇಸವಿ ದಿವಾಳಿ ಕೇಸ್ ಮಿಸ್. ನಂಬರು 334.

ಹುಕ್ಕುಂ.

ಮೇಲ್ಕಂಡ ಗುರುಮೂರ್ತಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು-ಬೆಂಗಳೂರು ಸಬಾರ್ಡಿನೇಟ್ ಜಡ್ಜ್ ಜೆ. ಹೆಚ್. ಭಾಭಾ, ಎಸಿಕ್ವಯರ್, ಬಿ. ಎ., ಬ್ಯಾರಿಸ್ಟರ್ ಅಟ್ ಲಾ ಯವರ ರೂಬರೂಬ್ ಅರ್ಜಿದಾರರಾದ ಗುರುಮೂರ್ತಪ್ಪನನ್ನು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲೀ ಅಥವಾ ಲಾಯರ್ ಮೂಲಕವಾಗಿಯಾಗಲೀ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ 1. ಚಿನ್ನಪ್ಪ, 2. ರಾಮರಡ್ಡಿ, 3. ಈರಪ್ಪ, 4. ದೊಡ್ಡಿಗಾಡ, ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಗುರುಮೂರ್ತಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿ ಯಾಗಲೀ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟು ಇರುತ್ತೆ.

ಸ್ಯ॥ 1907ನೆ ಇಸವಿ ಜುಲೈ 19ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನಮ್ಮ ಹಸ್ತಾಕ್ಷರದಿಂದ ಕೊಡಲ್ಪಟ್ಟಿತು

ಸಾಲದ ಪಟ್ಟಿ.

ನಂಬರ್.	ಲೇಣೀದಾರ್ರ ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಪ್ರಾಮಿಸರಿ ನೋಟ್ಸ್ ನಂಬರ್	ಲೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಪರಾ.
		ರೂ. ಚಿ. ಪೈ.			
1	ಬೆಂಗಳೂರು ಚಾಮರಾಜಪೇಟೇಲಿ ತರಗಸ ಮಂಡಿಯಲ್ಲಿರುವ ಚಿನ್ನಪ್ಪ.	90 2 6		ಡಿಕ್ರಿ ಬಾಬತು	ಹೆ ಕೋರ್ಟು ಸ್ಮಾಲ್‌ಕಾಸ್ 6—04—05
2	ಬೆಂಗಳೂರು ತಾಲ್ಲೂಕು ಆಗರದಲ್ಲಿರುವ ರಾಮರಡ್ಡಿ.	200 0 0		ಪತ್ರದ ಬಾಬತ್ತು	
3	ಕಿಡ್ಲಫಟ್ಟ ತಾಲ್ಲೂಕು ದೇವರ ಮಳ್ಳೂರಿನಲ್ಲಿರುವ ಕೂತಲು ಈರಪ್ಪ.	100 0 0		ಡಿಟೋ	
4	ಡಿಟೋ ಸ್ಥಳದಲ್ಲಿರುವ ಕೂತಲು ದೊಡ್ಡಿ ಗಾಫ.	50 0 0		ಡಿಟೋ	
	ಜುಮ್ಲಾ	440 2 6			

ಜೆ. ಹೆಚ್. ಭಾಭಾ,
ಸಬಾರ್ಡಿನೇಟ್ ಜಡ್ಜ.

ಮೈಸೂರ ಗೆಜೆಟ್ ಚಂದಾದಾರರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ಮುಂತಾವವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

ಚಂದಾ.

ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಹೊರತಾಯಿ ಇತರ ಸ್ಥಳಗಳಿಗೆ.

	ರೂ. ಅ.	ರೂ. ಅ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 0	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಷ್ ಮಾಹೇ ಯಾ ಕ್ವಾರ್ಟರಿಗೆ		

ದಾಮಾಷಾಯಿ ಪ್ರಕಾರ ದರಗಳು

	ರೂ. ಅ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇರ್ ಯಾ ಆಕ್ಟ್ಯಗಳು ಯಾವದೂ ಇಲ್ಲದಿದ್ದರೆ.	0 8

ಹಿಂದಿನ ವರ್ಷಗಳ ಗೆಜೆಟ್ಟು ಕಾಪಿಗಳಿಗೆ ಚಾಜ್ರು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮತ್ತು 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭವಿಕೆ ಕೆಲಸ ನೋಡುತಲಿದಾರೆಂಬದಾಗಿ ಆಯಾ ತಾಲ್ಲೂಕು ಅಮಲದಾರರಿಂದ ಅದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮತ್ತು 24205—6—ಜಿ. 6200ನೆ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವಿ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1860ನೆ ಇಸವಿ XXVIIನೆ ಆಕ್ಟ್ಯ ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟಿಸುಗಳು:—

	ರೂ. ಅ.
ಮೊದಲನೇ ದಫಾ ಫಾಯಿಲ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ	2 8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತನಕ್ಕೂ ಡಿಟೋ	1 4

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸುಗಳಿಗೆ:—

	ರೂ. ಅ.
ಮೊದಲನೇ ಸಲಕ್ಕೆ	5 0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2 8